# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ),
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು–560009

## 'ಸಹಾಯಕ ಇಂಜಿನಿಯರ್(ವಿದ್ಯುತ್/ಸಿವಿಲ್), ಕಿರಿಯ ಇಂಜಿನಿಯರ್(ವಿದ್ಯುತ್/ಸಿವಿಲ್), ಮತ್ತು ಕಿರಿಯ ಸಹಾಯಕ' ಹುದ್ದೆಯ ನೇಮಕಾತಿಯ ಅರ್ಜಿ ಸಲ್ಲಿಸುವಿಕೆಗೆ ಸೂಚನೆಗಳು

ಅಭ್ಯರ್ಥಿಗಳು ಅರ್ಜಿಗಳನ್ನು ಆನ್–ಲೈನ್ ಮೂಲಕ ಸಲ್ಲಿಸುವ ಮುನ್ನ ದಿನಾಂಕ: 01.02.2022 ರ ಉದ್ಯೋಗ ಪ್ರಕಟಣೆಯನ್ನು ಹಾಗೂ ಇದರೊಂದಿಗೆ ನೀಡಲಾಗುವ ಸೂಚನೆಗಳನ್ನು ಓದಿಕೊಂಡು, ಜಾಗರೂಕತೆಯಿಂದ ಅರ್ಜಿಯನ್ನು ಭರ್ತಿ ಮಾಡಬೇಕು.

1. ಅಭ್ಯರ್ಥಿಗಳು ಅರ್ಜಿಯನ್ನು ಕವಿಪ್ರನಿನಿಯ ವೆಬ್ ಸೈಟ್ **https://kptcl.karnataka.gov.in/** ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿಯೇ ವಿವರಗಳನ್ನು ಆನ್–ಲೈನ್ (**On-Line**) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಇನ್ನಿತರ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

2. ಅಭ್ಯರ್ಥಿಗಳು **On-Line** ಮೂಲಕ ಅರ್ಜಿಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಭರ್ತಿ ಮಾಡತಕ್ಕದ್ದು. ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಭರ್ತಿ ಮಾಡತಕ್ಕದ್ದು.

3. ಒಬ್ಬ ಅಭ್ಯರ್ಥಿ ಒಂದಕ್ಕಿಂತ ಹೆಚ್ಚಿನ ಹುದ್ದೆಗೆ ಅರ್ಜಿಯನ್ನು ಸಲ್ಲಿಸ ಬಯಸಿದ್ದಲ್ಲಿ, ಅಂತಹ ಅಭ್ಯರ್ಥಿಯು ಒಂದು ಹುದ್ದೆಗೆ ಅರ್ಜಿಯನ್ನು ಸಲ್ಲಿಸಿ, ಸೂಕ್ತ ಅರ್ಜಿ ಶುಲ್ಕ ಪಾವತಿಸಿ, ಶುಲ್ಕ ಪಾವತಿಯು ಖಚಿತಗೊಂಡ ನಂತರ ಮತ್ತೊಂದು ಹುದ್ದೆಗೆ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. ಇಂತಹ ಅಭ್ಯರ್ಥಿಗಳು ಮೊದಲನೇ ಅರ್ಜಿಯ ಸಂಖ್ಯೆಯನ್ನು ಸೂಕ್ತ ಸ್ಥಳದಲ್ಲಿ ಭರ್ತಿ ಮಾಡತಕ್ಕದ್ದು.

4. ಅಭ್ಯರ್ಥಿಗಳು ಯಾವುದೇ ತಪ್ಪು ಮಾಹಿತಿಯನ್ನು ನೀಡದೇ, ಅರ್ಜಿ ಭರ್ತಿ ಮಾಡಲು **On-Line** ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು. ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.

5. ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳುವುದು.

| | | | | | |
|---|---|---|---|---|---|
| SC | - | Scheduled Caste | ST | - | Scheduled Tribe |
| GM | - | General Merit | Cat-1 | - | Category I |
| IIA | - | Category 2A | IIB | - | Category 2B |
| IIIA | - | Category 3A | IIIB | - | Category 3B |

6. ಪ್ರಕಟಿಸಿರುವ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ ಇತ್ಯಾದಿ ವಿವರಗಳು ಉದ್ಯೋಗ ಪ್ರಕಟಣೆಯಲ್ಲಿ ಲಭ್ಯವಿರುತ್ತದೆ. ಸದರಿ ವಿವರಗಳಿಗಾಗಿ ಕವಿಪ್ರನಿನಿ ವೆಬ್‌ಸೈಟ್‌ಗೆ ಭೇಟಿ ನೀಡುವುದು.

<u>ಟಿಪ್ಪಣಿ:</u> ಪ್ರಕಟಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

7. ಶುಲ್ಕ ಪಾವತಿಸಬೇಕಾದ ವಿಧಾನ ಹಾಗೂ ಸ್ಥಳದ ವಿವರ:

**ಅರ್ಜಿ ಶುಲ್ಕ:**

1) ಸಾಮಾನ್ಯ ಅರ್ಹತೆ ಮತ್ತು ಪ್ರವರ್ಗ–I, IIA, IIB, IIIA ಮತ್ತು IIIB ಗೆ ಸೇರಿದ ಅಭ್ಯರ್ಥಿಗಳಿಗೆ – ರೂ.600/–(ಆರು ನೂರು ರೂಪಾಯಿಗಳು ಮಾತ್ರ (ಸರಕು ಮತ್ತು ಸೇವಾ ತೆರಿಗೆ ಹಾಗೂ ಅಂಚೆ ಸೇವಾ ಶುಲ್ಕ ಒಳಗೊಂಡಿರುತ್ತದೆ)
2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ – ರೂ. 350/– (ಮೂರು ನೂರು ಐವತ್ತು ರೂಪಾಯಿಗಳು ಮಾತ್ರ)

**ಟಿಪ್ಪಣಿ:** ವಿಕಲ ಚೇತನ ಅಭ್ಯರ್ಥಿಗಳು (**Physically Challenged Candidates**) ಅರ್ಜಿ ಶುಲ್ಕ ಪಾವತಿಸುವ ಅವಶ್ಯಕತೆ ಇರುವುದಿಲ್ಲ.

**i)** ಅರ್ಜಿ ಶುಲ್ಕವನ್ನು ಕರ್ನಾಟಕದ ಗಣಕೀಕೃತ ಅಂಚೆ ಕಚೇರಿಯಲ್ಲಿ, ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಂದಾಯ ಮಾಡಬಹುದಾಗಿದೆ. **ಇದನ್ನು ಹೊರತುಪಡಿಸಿ ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.**

- **ದಿನಾಂಕ: 09.03.2022 ರವರೆಗೆ ಕರ್ನಾಟಕದ ಗಣಕೀಕೃತ ಅಂಚೆ ಕಚೇರಿಯ ವ್ಯವಹಾರದ ವೇಳೆಯಲ್ಲಿ "ಆನ್ ಲೈನ್" ನಲ್ಲಿ ಲಭ್ಯವಿರುವ 'ಇ–ಅಂಚೆ ಕಛೇರಿ ಚಲನ್' ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಿದ ಅರ್ಹ ಅರ್ಜಿಗಳನ್ನು ಮಾತ್ರ ನೇಮಕಾತಿಗೆ ಪರಿಗಣಿಸಲಾಗುತ್ತದೆ.**
- **ಅರ್ಜಿ ಶುಲ್ಕವನ್ನು ದಿನಾಂಕ: 09.03.2022 ರವರೆಗೆ ಇ– ಅಂಚೆ ಕಛೇರಿ ವ್ಯವಹಾರದ ವೇಳೆಯನ್ನು ಹೊರತುಪಡಿಸಿ, ನಿಗದಿತ ಅವಧಿಯ ಮುಂಚೆ ಅಥವಾ ನಂತರ ಪಾವತಿಸಿದ ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೇ ಯಾವುದೇ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ ಮತ್ತು ಅಂತಹ ಅರ್ಜಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.**

8. ಕಲ್ಯಾಣ–ಕರ್ನಾಟಕ (ಹೈದರಾಬಾದ್–ಕರ್ನಾಟಕ) ಪ್ರದೇಶದ ಸ್ಥಳೀಯ ವ್ಯಕ್ತಿಗಳು ಸ್ಥಳೀಯ ವೃಂದದ ಹುದ್ದೆ ಹಾಗೂ ಮಿಕ್ಕುಳಿದ ವೃಂದದ ಹುದ್ದೆ ಈ ಎರಡೂ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಇಂತಹ ಅಭ್ಯರ್ಥಿಗಳು, ಆನ್–ಲೈನ್ ಅರ್ಜಿಯಲ್ಲಿ ಈ ಅಂಶವನ್ನು ಸ್ಪಷ್ಟವಾಗಿ ತಿಳಿಸುವುದು. ಅಲ್ಲದೆ, ಒಂದೇ ಹುದ್ದೆಯ ಆಯ್ಕೆಗೆ ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದ, ಎರಡೂ ವೃಂದಗಳಲ್ಲಿ ಅರ್ಹತೆ ಹೊಂದಿದಲ್ಲಿ, ಯಾವ ವೃಂದಕ್ಕೆ ಆಯ್ಕೆಯಾಗಲು ಬಯಸುತ್ತಾರೆ ಎಂಬುದರ ಬಗ್ಗೆ ಅಭ್ಯರ್ಥಿಗಳು ಆದ್ಯತೆಯನ್ನು ಆನ್–ಲೈನ್ ಅರ್ಜಿಯಲ್ಲಿ ತಪ್ಪದೇ ತಿಳಿಸುವುದು.

---------

## ಹಂತ–1

**A)** ಕವಿಪ್ರನಿನಿ ವೆಬ್‌ಸೈಟ್‌ನಲ್ಲಿ **"APPLICATION FOR VARIOUS POSTS IN KPTCL"** ಮೇಲೆ ಕ್ಲಿಕ್ ಮಾಡಿದ ನಂತರ **'Submit Application For the Post of ............................'** ಮೇಲೆ ಕ್ಲಿಕ್‌ಮಾಡಿ ಪರದೆ ಮೇಲೆ ಮೂಡುವ ಎಲ್ಲಾ ವಿವರಗಳನ್ನು ಭರ್ತಿ ಮಾಡಿ **'Preview' button'** ಮೇಲೆ ಕ್ಲಿಕ್ ಮಾಡಿದ ನಂತರ **Preview Page** ಮೂಡುತ್ತದೆ.

**B)** ತಿದ್ದುಪಡಿ ಇದ್ದಲ್ಲಿ **'Edit' button** ಮೇಲೆ ಕ್ಲಿಕ್ ಮಾಡಬೇಕು. **'Edit' button** ಉಪಯೋಗಿಸಿ, ಈ ಹಿಂದೆ ಭರ್ತಿ ಮಾಡಿದ ವಿವರಗಳಲ್ಲಿ ತಪ್ಪಿದ್ದಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಿ ಎಲ್ಲಾ ವಿವರಗಳು ಸರಿಯಾಗಿರುವ ಕುರಿತು ಖಾತರಿ ಪಡಿಸಿಕೊಂಡ ನಂತರ **'Submit' button** ಕ್ಲಿಕ್ ಮಾಡುವುದು.

**C)** ನಂತರ ಅಭ್ಯರ್ಥಿಯ **'Application ID'** ಸಂಖ್ಯೆಗಳನ್ನು ನೀಡಲಾಗುತ್ತದೆ. ಸದರಿ ಸಂಖ್ಯೆಗಳನ್ನು ತಪ್ಪದೇ ಬರೆದಿಟ್ಟುಕೊಂಡು **'Home button'** ಕ್ಲಿಕ್ ಮಾಡುವುದು.

## ಹಂತ–2

**D)** ನಂತರ ಅಭ್ಯರ್ಥಿಯು **'Upload Photo, Signature & Thumb Impression** ಕ್ಲಿಕ್ ಮಾಡುವುದು.

**E)** ನಂತರ **Application ID and Date Of Birth** ಯನ್ನು ಭರ್ತಿಮಾಡಿ **Submit button** ಆಯ್ಕೆ ಮಾಡುವುದು.

**F)** ನಂತರ **Photo, Signature & Thumb Impression** (ಭಾವಚಿತ್ರ, ಸಹಿ ಮತ್ತು ಹೆಬ್ಬೆರಳಿನ ಗುರುತು) ಅಪ್ ಲೋಡ್‌ಗೆ ನೀಡಲಾಗಿರುವ ಪ್ರಮಾಣಕ್ಕನುಗುಣವಾಗಿ **Photo, Signature & Thumb Impression** (ಭಾವಚಿತ್ರ, ಸಹಿ ಮತ್ತು ಹೆಬ್ಬೆರಳಿನ ಗುರುತು) **Upload** ಮಾಡುವುದು.

**G)** ನಂತರ **'Home button'** ಕ್ಲಿಕ್ ಮಾಡುವುದು.

## ಹಂತ–3

**H)** ನಂತರ, **'Upload your Caste and Article 371(j) Certificate' button** ಕ್ಲಿಕ್ ಮಾಡುವುದು.

**I)** ನಂತರ **Application ID and Date Of Birth** ಯನ್ನು ಭರ್ತಿಮಾಡಿ **Submit button** ಆಯ್ಕೆ ಮಾಡುವುದು.

**J)** ಆನ್‌ಲೈನ್ ಅರ್ಜಿಯಲ್ಲಿ ಜಾತಿ ಮೀಸಲಾತಿ ಮತ್ತು ಅನುಚ್ಛೇದ 371 (ಜೆ) ರಡಿಯಲ್ಲಿ ಮೀಸಲಾತಿ ಕೋರಿದ್ದಲ್ಲಿ, ತತ್ಸಂಬಂಧ ಪ್ರಮಾಣ ಪತ್ರಗಳನ್ನು ತಪ್ಪದೇ **Upload** ಮಾಡುವುದು.

**K)** ನಂತರ **'Home button'** ಕ್ಲಿಕ್ ಮಾಡುವುದು.

## ಹಂತ–4

**L)** ನಂತರ **'Generate Postal Challan' button** ಕ್ಲಿಕ್ ಮಾಡುವುದು.

**M)** ನಂತರ **'Application ID and Date Of Birth'** ಯನ್ನು ಭರ್ತಿಮಾಡಿ **'Submit button'** ಆಯ್ಕೆ ಮಾಡುವುದು.

**N)** ನಂತರ **'E-Post Office Challan'** ಅನ್ನು ಡೌನ್‌ಲೋಡ್ ಮಾಡಿಕೊಂಡು ಇ–ಅಂಚೆ ಕಛೇರಿಯಲ್ಲಿ ಅರ್ಜಿ ನಿಗಧಿತ ಅರ್ಜಿ ಶುಲ್ಕವನ್ನು ಪಾವತಿಸುವುದು.

## ಹಂತ–5

**O)** ನಂತರ **'Print Application' button** ಮೇಲೆ ಕ್ಲಿಕ್ ಮಾಡುವುದು (ಇ–ಅಂಚೆ ಕಛೇರಿಯಲ್ಲಿ ಅರ್ಜಿ ಶುಲ್ಕ ಪಾವತಿಯ 48 ಗಂಟೆಗಳ ನಂತರ). ನಂತರ **'Application ID and Date Of Birth'** ಯನ್ನು ನಮೂದಿಸಿ **'Submit' button'** ಮೇಲೆ ಕ್ಲಿಕ್‌ಮಾಡಿ ಅರ್ಜಿಯ ಮುದ್ರಣ ಪ್ರತಿ ಪಡೆಯುವುದು. ಈ ಅರ್ಜಿಯ ಪ್ರತಿಯನ್ನು ಅಭ್ಯರ್ಥಿಗಳು ಸುರಕ್ಷಿತವಾಗಿ ಪಡೆದಿಟ್ಟುಕೊಳ್ಳತಕ್ಕದ್ದು.

ಅಭ್ಯರ್ಥಿಗಳು **ON LINE** ಮೂಲಕ ಅರ್ಜಿಯನ್ನು ಭರ್ತಿ ಮಾಡುವಾಗ, ಈ ಕೆಳಗಿರುವ ಅಂಶಗಳನ್ನು ತಪ್ಪದೇ ಗಮನಿಸುವುದು:

| ಅಂಕಣ | ಭರ್ತಿ ಮಾಡಬೇಕಾದ ಮಾಹಿತಿ | | ಷರಾ (ಭರ್ತಿ ಮಾಡುವ ವಿವರ) |
|---|---|---|---|
| | Select your post | ಹುದ್ದೆಯನ್ನು ಆಯ್ಕೆ ಮಾಡಿ | ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಬಯಸುವ ಹುದ್ದೆಯನ್ನು ಆಯ್ದುಕೊಳ್ಳತಕ್ಕದ್ದು. |
| | Have you applied for any other posts? | ಇನ್ನಾವುದೇ ಹುದ್ದೆಗೆ ಅರ್ಜಿ ಸಲ್ಲಿಸಿದ್ದೀರಾ? | ಉದಾ: ಅಭ್ಯರ್ಥಿಗಳು ಒಂದು ಹುದ್ದೆಗೆ [ಸಹಾಯಕ ಇಂಜಿನಿಯರ್ (ವಿ)] ಈಗಾಗಲೇ ಪೂರ್ಣ ಪ್ರಮಾಣದಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ, ಮತ್ತೊಂದು ಹುದ್ದೆ [ಕಿರಿಯ ಇಂಜಿನಿಯರ್ (ವಿ)] ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ, ಸಹಾಯಕ ಇಂಜಿನಿಯರ್ (ವಿ.) ಹುದ್ದೆಗೆ ಸಲ್ಲಿಸಿದ್ದ ಅರ್ಜಿ ಸಂಖ್ಯೆ ನಮೂದಿಸುವುದು. |
| 1. | Applicant's Full Name | ಅಭ್ಯರ್ಥಿಯ ಪೂರ್ಣ ಹೆಸರು | ಎಸ್.ಎಸ್.ಎಲ್.ಸಿ. / ಹತ್ತನೇ ತರಗತಿಯ ಅಂಕಪಟ್ಟಿಯಲ್ಲಿರುವಂತೆ ನಮೂದಿಸುವುದು. |
| 2. | Mother's Name | ತಾಯಿಯ ಹೆಸರು | ಎಸ್.ಎಸ್.ಎಲ್.ಸಿ. / ಹತ್ತನೇ ತರಗತಿಯ ಅಂಕಪಟ್ಟಿಯಲ್ಲಿರುವಂತೆ ನಮೂದಿಸುವುದು (ನಮೂದಿಸಿದ್ದಲ್ಲಿ). |
| 3. | Father's Name | ತಂದೆಯ ಹೆಸರು | ಎಸ್.ಎಸ್.ಎಲ್.ಸಿ. / ಹತ್ತನೇ ತರಗತಿಯ ಅಂಕಪಟ್ಟಿಯಲ್ಲಿರುವಂತೆ ನಮೂದಿಸುವುದು. |
| 4. | Reservation Category | ಮೀಸಲಾತಿ ಪ್ರವರ್ಗ | ಸಾಮಾನ್ಯ ಅರ್ಹತೆ/ ಪ್ರವರ್ಗI / IIA / IIB / IIIA / IIIB / ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿ ಸಂಬಂಧಿಸಿದ ಪ್ರವರ್ಗವನ್ನು ಆಯ್ಕೆ ಮಾಡಿಕೊಳ್ಳುವುದು. [ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (14) ಓದಿಕೊಳ್ಳುವುದು]. |
| 5. | Date of Birth | ಜನ್ಮ ದಿನಾಂಕ | ಎಸ್.ಎಸ್.ಎಲ್.ಸಿ./ಹತ್ತನೇ ತರಗತಿಯ ಅಂಕಪಟ್ಟಿಯಲ್ಲಿರುವಂತೆ ನಮೂದಿಸುವುದು. |
| 6. | Address for Communication | ಪತ್ರ ವ್ಯವಹಾರಕ್ಕೆ ಪೂರ್ಣ ವಿಳಾಸ | ಅಭ್ಯರ್ಥಿಗಳು ನಿಗದಿತ ಸ್ಥಳದಲ್ಲಿ ತಮ್ಮ ಪೂರ್ಣ ವಿಳಾಸವನ್ನು, ಮೊಬೈಲ್ ಸಂಖ್ಯೆ ಹಾಗೂ ಇ–ಮೇಲ್ ನಮೂದಿಸುವುದು. |
| 7. | Gender | ಲಿಂಗ | ಗಂಡು/ಹೆಣ್ಣು/ತೃತೀಯ ಲಿಂಗ |
| 8. | Are you married? | ತಾವು ವಿವಾಹಿತರೇ? | ಹೌದು ಅಥವಾ ಇಲ್ಲಾ ತಿಳಿಸುವುದು. |
| 9. | Rural Applicant | ಗ್ರಾಮೀಣ ಅಭ್ಯರ್ಥಿ | ಹೌದು ಅಥವಾ ಇಲ್ಲಾ ತಿಳಿಸುವುದು.. [ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (14) ಓದಿಕೊಳ್ಳುವುದು] |
| 10. | KMS | ಕನ್ನಡ ಮಾಧ್ಯಮ ಅಭ್ಯರ್ಥಿ | ಹೌದು ಅಥವಾ ಇಲ್ಲಾ ತಿಳಿಸುವುದು. [ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (14) ಓದಿಕೊಳ್ಳುವುದು] |
| 11. | PDP | ಯೋಜನೆ ನಿರಾಶ್ರಿತರು | ಹೌದು ಅಥವಾ ಇಲ್ಲಾ ತಿಳಿಸುವುದು. [ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (14) ಓದಿಕೊಳ್ಳುವುದು] |
| 12. | PH | ಅಂಗವಿಕಲ ಅಭ್ಯರ್ಥಿ | ಹೌದು ಅಥವಾ ಇಲ್ಲಾ ತಿಳಿಸುವುದು. ಅಂಗವಿಕಲ ಅಭ್ಯರ್ಥಿಯಾದಲ್ಲಿ ಅಂಗವಿಕಲತೆಯ ಸ್ವರೂಪ ತಿಳಿಸುವುದು. ಅಂಧ ಅಥವಾ ದೃಷ್ಟಿಮಾಂದ್ಯ ಅಭ್ಯರ್ಥಿಗಳು ಪರೀಕ್ಷೆಗಳಿಗೆ ಲಿಪಿಕಾರರ ಸೌಲಭ್ಯದ ಅವಶ್ಯಕತೆ ಇದೆಯೇ ಎಂಬುದನ್ನು ತಿಳಿಸುವುದು. |

| | | | |
|---|---|---|---|
| | | | [ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (14) ಓದಿಕೊಳ್ಳುವುದು] |
| 13. | Ex-Military person | ಮಾಜಿ ಸೈನಿಕ | ಹೌದು ಅಥವಾ ಇಲ್ಲಾ ತಿಳಿಸುವುದು.<br>[ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (14) ಓದಿಕೊಳ್ಳುವುದು] |
| 14. | Are you claiming KKR reservation | ನೀವು ಕಲ್ಯಾಣ ಕರ್ನಾಟಕ ಮೀಸಲಾತಿ ಕೋರಬಯಸುತ್ತೀರಾ? | ಹೌದು ಅಥವಾ ಇಲ್ಲಾ ತಿಳಿಸುವುದು.<br>ಹೌದು ಎಂದಾದಲ್ಲಿ, ನೀವು ಕಲ್ಯಾಣ ಕರ್ನಾಟಕ ಮೀಸಲಾತಿ ಅಥವಾ ಕಲ್ಯಾಣ ಕರ್ನಾಟಕೇತರ ಮೀಸಲಾತಿಗೆ ಅದ್ಯತೆ ತಿಳಿಸುವುದು. |
| 15. | Do you claim age Relaxation? If yes, select accordingly. | ನೀವು ವಯೋಮಿತಿಯಲ್ಲಿ ರಿಯಾಯಿತಿ ಕೋರುವಿರಾ? | ಸಂಬಂಧಿಸಿದ ವಯೋಮಿತಿ ಸಡಿಲಿಕೆಯನ್ನು ಆಯ್ಕೆ ಮಾಡಿಕೊಂಡು, ಅರ್ಹ ಸೇವಾ ಅವಧಿಯನ್ನು ನಮೂದಿಸುವುದು (ಅರ್ಹರಿದ್ದಲ್ಲಿ) [ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (6) ಓದಿಕೊಳ್ಳುವುದು] |
| 16. | Have you Studied Kannada Language in SSLC or 10th Standard- 1st Language or 2nd Language or Medium of Instruction in Kannada or PUC- 1st Language or 2nd Language or Studied Kannada Language in any other higher examination | ಎಸ್.ಎಸ್.ಎಲ್.ಸಿ/10ನೇ ತರಗತಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆ ಅಥವಾ ದ್ವಿತೀಯ ಭಾಷೆ ಅಥವಾ ಕನ್ನಡ ಮಾಧ್ಯಮದಲ್ಲಿ ಅಥವಾ ದ್ವಿತೀಯ ಪಿಯುಸಿಯಲ್ಲಿ ಪ್ರಥಮ ಭಾಷೆ ಅಥವಾ ದ್ವಿತೀಯ ಭಾಷೆ ಅಥವಾ ಮೇಲ್ಪಟ್ಟ ಯಾವುದೇ ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ವ್ಯಾಸಂಗ ಮಾಡಿರುವಿರೇ? | ಹೌದು ಅಥವಾ ಇಲ್ಲಾ ತಿಳಿಸುವುದು.<br>[ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (11) ಓದಿಕೊಳ್ಳುವುದು] |
| 17. | SSLC Registration No | ಎಸ್.ಎಸ್.ಎಲ್.ಸಿ. ನೋಂದಣಿ ಸಂಖ್ಯೆ | ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿರುವಂತೆ ನೋಂದಣಿ ಸಂಖ್ಯೆ ಭರ್ತಿ ಮಾಡುವುದು. |
| | Select your qualification | ವಿದ್ಯಾರ್ಹತೆಯನ್ನು ತಿಳಿಸುವುದು | ತಮ್ಮ ವಿದ್ಯಾರ್ಹತೆಯನ್ನು ಆಯ್ಕೆ ಮಾಡುವುದು. |
| | Name of the college /Institution and University | ಕಾಲೇಜು/ವಿದ್ಯಾಸಂಸ್ಥೆ ಮತ್ತು ವಿಶ್ವವಿದ್ಯಾಲಯದ ಹೆಸರು | ಮೇಲೆ ತಿಳಿಸಿರುವ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಕಾಲೇಜು/ವಿದ್ಯಾಸಂಸ್ಥೆ ಮತ್ತು ವಿಶ್ವವಿದ್ಯಾಲಯದ ಹೆಸರು ನಮೂದಿಸುವುದು. |
| | Total marks secured (for all the semesters/years). | ಗಳಿಸಿರುವ ಒಟ್ಟು ಅಂಕಗಳು (ಎಲ್ಲಾ ಸೆಮಿಸ್ಟರ್/ವರ್ಷ ಸೇರಿ) | ಗಳಿಸಿದ ಅಂಕಗಳನ್ನು ಭರ್ತಿಮಾಡುವುದು<br>[ಅಂಕ ಪಟ್ಟಿಯಲ್ಲಿ ಇರುವಂತೆ]<br>[ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (3) ಓದಿಕೊಳ್ಳುವುದು] |
| | Maximum Marks (for all the semesters/years). | ಗರಿಷ್ಠ ಅಂಕಗಳು (ಎಲ್ಲಾ ಸೆಮಿಸ್ಟರ್/ವರ್ಷ ಸೇರಿ) | ಗರಿಷ್ಠ ಅಂಕಗಳನ್ನು ಭರ್ತಿಮಾಡುವುದು<br>[ಅಂಕ ಪಟ್ಟಿಯಲ್ಲಿ ಇರುವಂತೆ)<br>[ಉದ್ಯೋಗ ಪ್ರಕಟಣೆಯ ಕ್ರಮ ಸಂಖ್ಯೆ (3) ಓದಿಕೊಳ್ಳುವುದು] |
| | Select Test Centre | ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿ | Test Centre ಆಯ್ಕೆ ಮಾಡುವುದು. |
| | Are you a State/Central Government Servant? | ರಾಜ್ಯ/ಕೇಂದ್ರ ಸರ್ಕಾರಿ ಸೇವೆಯಲ್ಲಿ ಇರುವಿರಾ? | ಸರ್ಕಾರಿ ಸೇವೆಯಲ್ಲಿ ಇದ್ದಲ್ಲಿ/ಇಲ್ಲದಿದ್ದಲ್ಲಿ – ಹೌದು/ಇಲ್ಲ. |

| | | | |
|---|---|---|---|
| | Presently working? | ಪ್ರಸ್ತುತ ಕೆಲಸದಲ್ಲಿ ಇರುವಿರಾ? | ಹೌದು/ಇಲ್ಲ (ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು). |
| | Have you ever been dismissed from your services. | ಸೇವೆಯಿಂದ ವಜಾಗೊಂಡಿದ್ದೀರಾ? | ಹೌದು/ಇಲ್ಲ. (ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು). |

* ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: **07.02.2022**

* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **07.03.2022**

* ಅರ್ಜಿ ಶುಲ್ಕ ಪಾವತಿಗೆ ಕೊನೆಯ ದಿನಾಂಕ: **09.03.2022**

**ಅರ್ಜಿ ಶುಲ್ಕ ಪಾವತಿ ವಿಚಾರಣೆಗಾಗಿ:**

ಅಭ್ಯರ್ಥಿಗಳು ಅರ್ಜಿ ಶುಲ್ಕ ಪಾವತಿಸಿರುವ ಬಗ್ಗೆ **www.karnatakapost.gov.in** ನಲ್ಲಿ ಅರ್ಜಿ ಶುಲ್ಕ ಪಾವತಿಸಿದ **48** ಗಂಟೆಗಳ ನಂತರ ದೃಢಪಡಿಸಿಕೊಳ್ಳಬಹುದಾಗಿದೆ. ಪಾವತಿ ಸಂದರ್ಭದಲ್ಲಿ ಯಾವುದೇ ಸ್ಪಷ್ಟೀಕರಣಕ್ಕಾಗಿ ಅಭ್ಯರ್ಥಿಗಳು ಅಂಚೆ ಕಚೇರಿ ಸಹಾಯವಾಣಿ ದೂರವಾಣಿ ಸಂಖ್ಯೆ: **080-22392668, (ಸೋಮವಾರ ದಿಂದ ಶುಕ್ರವಾರದವರೆಗೆ, ಸಮಯ ಬೆಳಗ್ಗೆ 09:30 ರಿಂದ ಸಂಜೆ 05:00 ಗಂಟೆಯವರೆಗೆ)** ಸಂಪರ್ಕಿಸುವುದು.